ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.
ಸಿ.ಸಿ ನಂಃ **3782/ 2023**

| | | |
|---|---|---|
| ಸಾಕ್ಷಿಯ ಹೆಸರುಃ | ಶ್ರೀ ಜೆಟ್ಟೆಪ್ಪ | ಫ್ರಾಸಾಃ 05 |
| ತಂದೆ ಹೆಸರುಃ | ನಾಗಪ್ಪ | ಚಾಸಾಃ 09 |
| ವಯಸ್ಸುಃ | 39 ವರ್ಷ | ದಿಃ 14-07-2026 |
| ಉದ್ಯೋಗಃ | ಅಬಕಾರಿ ಮುಖ್ಯ ಪೇದೆ ಸರ್ಜಾಪುರ ವಲಯ ಬೆಂಗಳೂರು | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಬೆಂಗಳೂರು | |

<u>ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ನಾನು 2017 ರಿಂದ 2023 ವರೆಗೆ ಶಹಾಪೂರ ಅಬಕಾರಿ ಉಪ ವಿಭಾಗದಲ್ಲಿ ಅಬಕಾರಿ ಪೇದೆಯಾಗಿ ಕಾರ್ಯ ನಿರ್ವಹಿಸಿರುತ್ತೇನೆ.

ನಾನು ದಿನಾಂಕ 07.10.2022 ರಂದು ಮ 3.20 ಗಂಟೆಗೆ ನಾವುಗಳು ಗುಂಜನೂರು ಕ್ರಾಸ್ ಹತ್ತಿರ ರಸ್ತೆಗಾವಲು ಮಾಡುತ್ತಿದ್ದಾಗ ಜಲಾಲಪೂರ ಕಡೆಯಿಂದ ಒಬ್ಬ ವ್ಯಕ್ತಿ ಬೈಕಿನಲ್ಲಿ ಸೇಂದಿ ಸಾಗಾಟ ಮಾಡುತ್ತಿರುವ ಬಗ್ಗೆ ತಮಗೆ ಮಾಹಿತಿ ಬಂದಿರುವುದಾಗಿ ಚಾಸಾ 1 ರವರು ನಮಗೆ ತಿಳಿಸಿದ್ದರು. ಆಗ ನಾವು ಚಾಸಾ 2 ಮತ್ತು 3 ರವರನ್ನು ಪಂಚರನ್ನಾಗಿ ಕರೆದುಕೊಂಡು ಕುಂಟಿಮರಿ ಚೆಕ್ ಪೋಸ್ಟ ಹತ್ತಿರ ಹೋಗಿದ್ದೆವು. ನಾವುಗಳು ಇಲಾಖಾ ವಾಹನವನ್ನು ಮರೆಯಲ್ಲಿ ನಿಲ್ಲಿಸಿನ ರಸ್ತೆಗಾವಲು ಮಾಡುತ್ತಿದ್ದಾಗ ಸ್ವಲ್ಪ ಸಮಯದ ನಂತರ ತೆಲಂಗಾಣ ಕಡೆಯಿಂದ ಒಂದು ಬೈಕ್ ಅನುಮಾನಸ್ಪದವಾಗಿ ಬರುತ್ತಿರುವುದು ಕಂಡುಬಂದಿರುತ್ತದೆ. ನಾವು ಬೈಕ್ ನಿಲ್ಲಿಸುವಂತೆ ತಿಳಿಸಿದಾಗ ಆರೋಪಿ ಬೈಕನ್ನು ನಮ್ಮಿಂದ ಸುಮಾರು 50 ಮೀಟರ ದೂರದಲ್ಲಿ ನಿಲ್ಲಿಸಿ ಓಡಿ ಹೋಗಿದ್ದನು. ನಾವು ಆತನನ್ನು ಹಿಡಿಯಲು ಪ್ರಯತ್ನಿಸಿದ್ದರೂ ಆತ ಸಿಗದೇ ಪರಾರಿ ಆಗಿದ್ದನು. ನಂತರ ಶೋಧನಾ ಆಧಾರ ಪತ್ರ ತಯಾರಿಸಿಕೊಂಡು ಪರೀಶಿಲನೆ ಮಾಡಲಾಗಿ ಎ.ಪಿ 22 ಎಡಿ 7614 ಸಂಖ್ಯೆಯ ನೀಲಿ ಬಣ್ಣದ ಟಿವಿಎಸ್ ಎಕ್ಸೆಲ್ ಬೈಕ್ ಆಗಿದ್ದು ಅದರಲ್ಲಿನ ಬಿಳಿ ಬಣ್ಣದ ಗೊಬ್ಬರ ಚೀಲದಲ್ಲಿ ಒಂದು ಲೀಟರ ಅಳತೆಯ ಪ್ಲಾಸ್ಟಿಕ್ ಕವರಗಳಲ್ಲಿ 48 ಲೀಟರ ಸೇಂದಿ ಇರುವುದು ಕಂಡು ಬಂದಿರುತ್ತದೆ. ಬೈಕಿನ ಕವರಿನಲ್ಲಿ ಆರೋಪಿಯ ಆಧಾರ ಕಾರ್ಡ ಜೇರಾಕ್ಸ ಪ್ರತಿ ಸಿಕ್ಕಿರುತ್ತದೆ ನಂತರ 01 ಲೀಟರಿನ ಎರಡು ಬಾಟಲಿಗಳಲ್ಲಿ 02 ಲೀಟರ ಸೇಂದಿಯನ್ನು ರಾಸಾಯನಿಕ ಪರೀಕ್ಷೆಗೆ ಮಾದರಿಯಾಗಿ ತೆಗೆದುಕೊಂಡಿದ್ದೆವು. ಮ 4.10 ರಿಂದ 5.10 ರವರೆಗೆ ಸ್ಥಳದಲ್ಲಿ ಪಂಚನಾಮೆ ಮಾಡಿದ್ದೆವು. ನಂತರ ಕಚೇರಿಗೆ ಬಂದು ಚಾಸಾ 1 ರವರು ದೂರು ದಾಖಲು ಮಾಡಿಕೊಂಡಿದ್ದರು. ನಂತರ ನಾನು ತನಿಖಾಧಿಕಾರಿಗೆ ಹೇಳಿಕೆ ನೀಡಿದ್ದೆನು.

ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಆತ ಸೇಂದಿ ಸಾಗಾಟ ಮಾಡುತ್ತಿದ್ದ ವ್ಯಕ್ತಿ ಆಗಿರುತ್ತಾರೆ ಎಂದು ನುಡಿಯುತ್ತಾರೆ.

ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮು.ಮಾ 1 ಮತ್ತು 2 ರ ಎರಡು ಪ್ಲಾಸ್ಟಿಕ್ ಬಾಟಲಿಗಳನ್ನು ನೋಡಿ ಅವುಗಳು ಮಾದರಿ ಸೇಂದಿ ಬಾಟಲಿಗಳಾಗಿರುತ್ತವೆ ಎಂದು ನುಡಿಯುತ್ತಾರೆ.

ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಜಿ ಆರ್ ವಕೀಲರಿಂದಃ

ನಾವು ಸದರಿ ದಿನದಂದು ಯಾವ ಯಾವ ಸ್ಥಳಗಳಲ್ಲಿ ಗಸ್ತು ಮಾಡುತ್ತಾ ಹೋಗಿದ್ದೆವು ಎಂಬುದು ಈಗ ನನಗೆ ನೆನಪಿಲ್ಲ. ಕುಂಟಮರಿ ಚೆಕಪೋಸ್ಟ ನಿಂದ ಕೇವಲ 20 ಮೀಟರ ದೂರದಲ್ಲಿ ತೆಲಂಗಾಣ ರಾಜ್ಯದ ಗಡಿ ಇರುತ್ತದೆ ಎಂದರೆ ಸಾಕ್ಷಿ ಚೆಕಪೋಸ್ಟಗೆ ಹೊಂದಿಕೊಂಡು ತೆಲಂಗಾಣ ರಾಜ್ಯದ ಗಡಿ ಇರುತ್ತದೆ ಎಂದು ನುಡಿಯುತ್ತಾರೆ. ಗುಂಜನೂರು ಕ್ರಾಸನಿಂದ ಸದರಿ ಚೆಕಪೋಸ್ಟ ಸುಮಾರು 10 ರಿಂದ 12 ಕಿ.ಮಿ ದೂರ ಇದೆ ಎಂದರೆ ಸರಿ. ಸದರಿ ದೂರ ಪ್ರಯಾಣಿಸಲು ಸುಮಾರು 20 ರಿಂದ 30 ನಿಮಿಷ್ಯ ಸಮಯ ಬೇಕಾಗುತ್ತದೆ ಎಂದರೆ ಸರಿ.

02. ಚಾಸಾ 1 ರವರಿಗೆ ಮಾಹಿತಿ ಬಂದಾಗ ಸಮಯ ಮ.3.20 ಗಂಟೆ ಆಗಿತ್ತು. ಚಾಸಾ 2 ಮತ್ತು 3 ರವರು ನಸಲವಾಯಿ ಗ್ರಾಮದವರಾಗಿರುತ್ತಾರೆ. ಅವರುಗಳು ಗುಂಜನೂರು ಕ್ರಾಸ ಹತ್ತಿರ ಯಾಕೆ ಬಂದಿದ್ದರು ಎಂಬುದು ನನಗೆ ಗೊತ್ತಿಲ್ಲ. ಆರೋಪಿ ಸೇಂದಿ ಮಾರಾಟ ಮಾಡುತ್ತಾನೇಯೇ ಎಂಬ ಬಗ್ಗೆ ನಾವು ಮಾರ್ಗ ಮಧ್ಯದಲ್ಲಿ ಅನಪೂರ ಗ್ರಾಮಸ್ಥರನ್ನು ವಿಚಾರಣೆ ಮಾಡಿಲ್ಲ. ನಾವು ಸೇಂದಿ ಪಾಕೆಟಗಳನ್ನು ಅಳತೆ ಮಾಡಿ ನೋಡಿಲ್ಲ ಆದರೆ ಅಂದಾಜು 1 ಲೀಟರ ಇರುವುದು ಗೊತ್ತಾಗಿರುತ್ತದೆ. ಕುಂಟಮರಿ ಚೆಕಪೋಸ್ಟ ಹತ್ತಿರ ಸುಮಾರು 7 ರಿಂದ 8 ನಿಮಿಷ್ಯದವರೆಗೆ ರಸ್ತೆಗಾವಲು ಮಾಡಿದ್ದೆವು. ಆ ಸಮಯದಲ್ಲಿ ಎಷ್ಟು ವಾಹನ ತಪಾಸಣೆ ಮಾಡಿದ್ದೆವು ಎಂಬುದು ನನಗೆ ಈಗ ನೆನಪಿಲ್ಲ. ಆರೋಪಿ ಯಾವ ಕಡೆಗೆ ಓಡಿ ಹೋಗಿದ್ದನು ಎಂಬುದು ನನಗೆ ನೆನಪಿಲ್ಲ.

ನಾವು ಯಾವುದೇ ಸ್ಥಳಕ್ಕೆ ಹೋಗಿಲ್ಲ, ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿಲ್ಲ ಹಾಗೂ ಯಾವುದೇ ವಸ್ತು ಜಪ್ತಿ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಇಲಾಖಾ ಅಂಕಿ-ಅಂಶಗಳಿಗಾಗಿ ಸುಳ್ಳು ಪ್ರಕರಣ ದಾಖಲಿಸಿಕೊಂಡಿದ್ದೇವೆಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳ ಮಾತು ಕೇಳಿ ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಆರೋಪಿಯನ್ನು ಈ ದಿನ ಮೊದಲ ಬಾರಿ ನೋಡುತ್ತಿದ್ದೆನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇರುವುದಿಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ